# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2282 |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 26-03-2026 |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿಗಳು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ಮೆಟ್ರೋ ಅಭಿವೃದ್ಧಿ ಕಾಮಗಾರಿ ಕೆ.ಎಸ್.ಆರ್ ಇಂದ ವಿಮಾನ ನಿಲ್ದಾಣದ ಕಾಮಗಾರಿಯವರೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; ಅದರಲ್ಲಿ ರಾಜ್ಯ ಸರ್ಕಾರದ ಅನುದಾನ ಎಷ್ಟು; ಕೇಂದ್ರ ಸರ್ಕಾರದ ಅನುದಾನ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)</td><td>ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2ಎ ಮತ್ತು 2ಬಿಗಾಗಿ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ 58.19 ಕಿ.ಮೀ. ಉದ್ದದ ಯೋಜನೆಗೆ ದಿನಾಂಕ:11.03.2026 ರವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಈ ಕೆಳಕಂಡಂತಿವೆ:<br><br>(ರೂ. ಕೋಟಿಗಳಲ್ಲಿ)
<table>
<tr><th>ವಿವರಗಳು</th><th>ಕೇಂದ್ರ ಸರ್ಕಾರ</th><th>ರಾಜ್ಯ ಸರ್ಕಾರ</th><th>ಇತರೆ</th><th>ಒಟ್ಟು</th></tr>
<tr><td>ಸಾಮ್ಯಷೇರು</td><td>1,617.25</td><td>1,617.25</td><td>-</td><td>3,234.50</td></tr>
<tr><td>ಅಧೀನ ಸಾಲ</td><td>369.56</td><td>4,466.75</td><td>-</td><td>4,836.31</td></tr>
<tr><td>ಬಾಹ್ಯ ಸಾಲದ ವಿರುದ್ಧ ಕೇಂದ್ರ ಸರ್ಕಾರದಿಂದ ನೀಡಲಾದ ಪಾಸ್ ತ್ರೂ ಅಸಿಸ್ಟೆನ್ಸ್ (PTA).</td><td>5,960.42</td><td>-</td><td>-</td><td>5,960.42</td></tr>
<tr><td>ನವೀನ ಹಣಕಾಸು ವ್ಯವಸ್ಥೆ</td><td>-</td><td>-</td><td>341.00</td><td>341.00</td></tr>
<tr><td>ಒಟ್ಟು</td><td>7,947.23</td><td>6,084.00</td><td>341.00</td><td>14,372.23</td></tr>
</table></td></tr>
<tr><td>ಆ)</td><td>ಯಾವ ಕಾಲಮಿತಿಯೊಳಗೆ ವಿಮಾನ ನಿಲ್ದಾಣದ ಮೆಟ್ರೋ ಕಾಮಗಾರಿಯನ್ನು ಪೂರ್ಣ ಮಾಡಲಾಗುತ್ತದೆ; ಕಾಮಗಾರಿಯೂ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.<br>ಬೆಂಗಳೂರು ಮೆಟ್ರೋ ಯೋಜನೆ ಹಂತ-2ಎ ಮತ್ತು 2ಬಿ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೃಷ್ಣರಾಜಪುರ ಹಾಗೂ ಹೆಬ್ಬಾಳದ ಮೂಲಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಕೇಂದ್ರ ಸರ್ಕಾರದಿಂದ ದಿನಾಂಕ:07-06-2021 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಯನ್ನು 5 ವರ್ಷಗಳ ಅವಧಿಯಲ್ಲಿ ಅಂದರೆ ಜೂನ್-2026ರ ವೇಳೆಗೆ ಮುಕ್ತಾಯಗೊಳಿಸಬೇಕಾಗಿರುತ್ತದೆ.</td></tr>
</table>

| | | |
|---|---|---|
| | | ಯೋಜನೆಯ ಪ್ರಾರಂಭದಲ್ಲಿ ಕಾಮಗಾರಿಯು ಈ ಕೆಳಕಂಡ ಅಡಚಣೆಗಳಿಂದಾಗಿ ವಿಳಂಬವಾಗಿರುತ್ತದೆ:<br>1. ಮರಗಳ ಕಟಾವು/ ಸ್ಥಳಾಂತರಕ್ಕೆ ಸಂಬಂಧಿಸಿದ ಅನುಮತಿಯನ್ನು ಮಾನ್ಯ ಉಚ್ಚ ನ್ಯಾಯಾಲಯದಿಂದ ದಿನಾಂಕ:15-05-2022ರಂದು ಪಡೆಯಲಾಗಿದೆ.<br>2. ಸ್ಪ್ಲಿಟ್ ಫ್ಲೈಓವರ್‌ನ ಕಾರಣದಿಂದ ರಸ್ತೆ ಉಳಿಸುವ ಉದ್ದೇಶದಿಂದ ಕಾಂಸೆಂಟ್ರಿಕ್ ಪಿಯರ್ ಅನ್ನು ಪೋರ್ಟಲ್ ಪಿಯರ್ ಆಗಿ ಪರಿವರ್ತಿಸಲಾಗಿದೆ.<br>3. ವೀರಣ್ಣಪಾಳ್ಯದಲ್ಲಿ GAIL ಗ್ಯಾಸು ಪೈಪ್‌ಲೈನ್ ಸ್ಥಳಾಂತರದಲ್ಲಿ ವಿಳಂಬ.<br>4. ಹೊರಮಾವು ಮತ್ತು ಹೆಚ್‌ಬಿಆರ್ ನಿಲ್ದಾಣಗಳ ಮಧ್ಯೆ ಮೇಲ್ದಾರಿ HT ವಿದ್ಯುತ್ ಮಾರ್ಗವನ್ನು ಸುರಂಗ ಮಾರ್ಗ (UG) ಆಗಿ ಪರಿವರ್ತಿಸುವುದು.<br>5. ಕಟ್ ಅಂಡ್ ಕವರ್ ಕಾಮಗಾರಿಗಾಗಿ ಯಲಹಂಕದಲ್ಲಿನ ಐಎಎಫ್ (IAF) ಭೂಮಿಯನ್ನು ಪಡೆಯುವಲ್ಲಿ ವಿಳಂಬ.<br>6. ಹೆಬ್ಬಾಳ ಪ್ರದೇಶದಲ್ಲಿ ರಸ್ತೆ ಸುರಂಗ ಮತ್ತು ಅದರ ರಾಂಪ್ (Ramp)ಗಳನ್ನು ಹೊಂದಿಸಲು ಅಗತ್ಯವಾದ ಬದಲಾವಣೆಗಳು.<br>ಪ್ರಸ್ತುತ ಹಂತ-2ಎ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೃಷ್ಣರಾಜಪುರವರೆಗೆ 19.75 ಕಿ.ಮೀ.ಗಳ ಉದ್ದದೊಂದಿಗೆ 13 ಎಲಿವೇಟೆಡ್ ನಿಲ್ದಾಣವನ್ನು ಡಿಸೆಂಬರ್-2026ರ ವೇಳೆಗೆ ಮುಕ್ತಾಯಗೊಳಿಸಲು ಯೋಜಿಸಲಾಗಿದೆ ಮತ್ತು ಹಂತ-2ಬಿ ಕೃಷ್ಣರಾಜಪುರದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ 38.44 ಕಿ.ಮೀ.ಗಳ ಉದ್ದದೊಂದಿಗೆ 16 ಎಲಿವೇಟೆಡ್ ನಿಲ್ದಾಣಗಳ ಕಾಮಗಾರಿಯನ್ನು ಡಿಸೆಂಬರ್-2027ರ ವೇಳೆಗೆ ಮುಕ್ತಾಯಗೊಳಿಸಲು ಯೋಜಿಸಲಾಗಿದೆ. |
| ಇ) | ಕಳೆದ 3 ವರ್ಷಗಳಲ್ಲಿ ಮೆಟ್ರೋ ದರ ಏರಿಕೆಯಾಗಿರುವ ಸಂಪೂರ್ಣ ಮಾಹಿತಿ ನೀಡುವುದು; (ಒಂದು ನಿಲ್ದಾಣದಿಂದ ಇನ್ನೊಂದು ನಿಲ್ದಾಣದವರೆಗೆ) | ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ–1, 42.30 ಕಿ.ಮೀ. ಉದ್ದವನ್ನು ಒಳಗೊಂಡಿದ್ದು, ಅಕ್ಟೋಬರ್-2011 ರಿಂದ ಜೂನ್-2017ರವರೆಗೆ ಹಂತ ಹಂತವಾಗಿ ಸಾರ್ವಜನಿಕ ಸೇವೆಗೆ ಮುಕ್ತಗೊಳಿಸಲಾಗಿದೆ.<br>ಮೆಟ್ರೋ ರೈಲ್ವೇ (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯ್ದೆ-2002ರ ವಿಧಿಗಳ ಪ್ರಕಾರ, ಪ್ರಾರಂಭಿಕ ಪ್ರಯಾಣ ದರ ರಚನೆಯನ್ನು ಬಿಎಮ್‌ಆರ್‌ಸಿಎಲ್ ನಿರ್ದೇಶಕ ಮಂಡಳಿಯು ನಿಗದಿಪಡಿಸಿತು. ಪೂರ್ಣ 42.30 ಕಿ.ಮೀ ಮಾರ್ಗಕ್ಕೆ ಪ್ರಾರಂಭಿಕ ಪ್ರಯಾಣ ದರ ರಚನೆಯನ್ನು ಜೂನ್-2017ರಲ್ಲಿ ನಿಗದಿಪಡಿಸಲಾಯಿತು. ಅದಾದ ಬಳಿಕ 7.5 ವರ್ಷಗಳಿಗಿಂತ ಹೆಚ್ಚು ಕಾಲ ಯಾವುದೇ ದರ ಪರಿಷ್ಕರಣೆ ಮಾಡಿರುವುದಿಲ್ಲ. |

ಮೆಟ್ರೋ ರೈಲ್ವೇ (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯ್ದೆ, 2002ರ ವಿಧಿಗಳ ಪ್ರಕಾರ, ಮೆಟ್ರೋ ರೈಲು ಕಂಪನಿಯ ವಿನಂತಿಯ ಮೇರೆಗೆ ಕೇಂದ್ರ ಸರ್ಕಾರ ರಚಿಸಿದ ಪ್ರಯಾಣ ದರ ನಿಗದಿ ಸಮಿತಿಯ (Fare Fixation Committee) ಶಿಫಾರಸುಗಳ ಆಧಾರದ ಮೇಲೆ ಮುಂದಿನ ದರ ಪರಿಷ್ಕರಣೆ ಮಾಡಬೇಕಾಗುತ್ತದೆ.

ಬಿಎಮ್‌ಆರ್‌ಸಿಎಲ್ ನೀಡಿದ ವಿನಂತಿಯ ಆಧಾರದ ಮೇಲೆ, ಕೇಂದ್ರ ಸರ್ಕಾರ ದಿನಾಂಕ:07.09.2024ರಂದು ಮೊದಲ ಪ್ರಯಾಣ ದರ ನಿಗದಿ ಸಮಿತಿಯನ್ನು (Fare Fixation Committee) ರಚಿಸಲಾಯಿತು. ಪ್ರಯಾಣ ದರ ನಿಗದಿ ಸಮಿತಿ (Fare Fixation Committee) ತನ್ನ ವರದಿಯನ್ನು ದಿನಾಂಕ:16.12.2024ರಂದು ಬಿಎಮ್‌ಆರ್‌ಸಿಎಲ್‌ಗೆ ಸಲ್ಲಿಸಿದೆ. ಪ್ರಯಾಣ ದರ ರಚನೆಯನ್ನು ಸರಳಗೊಳಿಸಲು ಮತ್ತು ಸಮಂಜಸಗೊಳಿಸಲು, ಪ್ರಸ್ತುತ ಇರುವ 29 ವಲಯಗಳ ಬದಲು 10 ದರ ವಲಯಗಳನ್ನು ಹೊಂದುವಂತೆ ಸಮಿತಿಯು ಶಿಫಾರಸು ಮಾಡಿದೆ. ಸಮಿತಿಯು ಶಿಫಾರಸು ಮಾಡಿದ ಪರಿಷ್ಕೃತ ದರ ರಚನೆ ರೂ. 10 ರಿಂದ ರೂ. 90ರವರೆಗೆ ಇದೆ. ಅದರ ವಿವರಗಳು ಕೆಳಕಂಡಂತಿವೆ:

| **ಪ್ರಯಾಣ ದರ ವಲಯ** | **ದೂರದ ಮಿತಿ (ಕಿ.ಮೀ)** | **ಬಿಎಮ್‌ಆರ್‌ಸಿಎಲ್ ದರ** |
|---|---|---|
| ಎಫ್1 | 0-2 | 10 |
| ಎಫ್2 | 2-4 | 20 |
| ಎಫ್3 | 4-6 | 30 |
| ಎಫ್4 | 6-8 | 40 |
| ಎಫ್5 | 8-10 | 50 |
| ಎಫ್6 | 10-15 | 60 |
| ಎಫ್7 | 15-20 | 70 |
| ಎಫ್8 | 20-25 | 80 |
| ಎಫ್9 | 25-30 | 90 |
| ಎಫ್10 | >30 | 90 |

**ಸೂಚನೆ:** Fare Fixation Committee ನೀಡಿದ ಶಿಫಾರಸುಗಳ ಪ್ರಕಾರ ಕೆಳಗಿನ ರಿಯಾಯಿತಿಗಳನ್ನು ನೀಡುತ್ತಿದೆ:

ಪೀಕ್ ಅವರ್ಸ್ (Peak Hours) ಸಮಯದಲ್ಲಿ ಸ್ಮಾರ್ಟ್ ಕಾರ್ಡ್ ಬಳಸುವ ಪ್ರಯಾಣಿಕರಿಗೆ 5% ರಿಯಾಯಿತಿ ನೀಡಲಾಗುತ್ತಿದೆ.

ಆಫ್-ಪೀಕ್ ಅವರ್ಸ್ (Off-Peak Hours) ಸಮಯದಲ್ಲಿ ಸ್ಮಾರ್ಟ್ ಕಾರ್ಡ್ ಬಳಕೆದಾರರಿಗೆ ಹೆಚ್ಚುವರಿ 5% ರಿಯಾಯಿತಿ ನೀಡಲಾಗುತ್ತಿದೆ.

| | | |
|---|---|---|
| | | ಈ ರಿಯಾಯಿತಿ ಭಾನುವಾರಗಳು ಮತ್ತು ರಾಷ್ಟ್ರೀಯ ರಜಾದಿನಗಳನ್ನು ಹೊರತುಪಡಿಸಿ ಎಲ್ಲಾ ದಿನಗಳಲ್ಲಿ ಅನ್ವಯಿಸುತ್ತದೆ. ಭಾನುವಾರಗಳು ಮತ್ತು ರಾಷ್ಟ್ರೀಯ ರಜಾ ದಿನಗಳಲ್ಲಿ ಸ್ಮಾರ್ಟ್ ಕಾರ್ಡ್ ಬಳಕೆದಾರರಿಗೆ 10% ರಿಯಾಯಿತಿ ನೀಡಲಾಗುತ್ತಿದೆ. |
| ಈ) | ಚಲನಚಿತ್ರ ನಟ ದಿ: ಶಂಕರ್ ನಾಗ ಅವರ ಕನಸಿನ ಮಗು ಬೆಂಗಳೂರು ಮೆಟ್ರೋವಾಗಿದ್ದು, ಯಾವುದಾದರೂ ನಿಲ್ದಾಣಕ್ಕೆ ಅವರ ಹೆಸರನ್ನಿಡುವುದಾಗಿ ಸರ್ಕಾರ ಚಿಂತಿಸಿದೆಯೇ; ಚಿಂತಿಸಿದ್ದಲ್ಲಿ, ಯಾವ ನಿಲ್ದಾಣಕ್ಕೆ ಹೆಸರನ್ನಿಡಲು ಚಿಂತಿಸಿದೆ? | ಚಲನಚಿತ್ರ ನಟ ದಿ: ಶಂಕರ್ ನಾಗ್‌ರವರ ಹೆಸರನ್ನು ಯಾವುದಾದರೂ ಒಂದು ಮೆಟ್ರೋ ನಿಲ್ದಾಣಕ್ಕೆ ಇರಿಸುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |

ಕಡತ ಸಂಖ್ಯೆ:ನಅಇ 58 ಪಿಆರ್‌ಜೆ 2026

**(ಡಿ. ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ